ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY
Accredited 'A' Grade by NAAC 2022

Azadi Ka Amrit Mahotsav

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನಂ. ಕವಿವಿ/ ಗ್ರಂಥ/IR/2022-23/ 756 ದಿನಾಂಕ: 15/2/2023

## ಸುತ್ತೋಲೆ

ವಿಷಯ: ವಿಶ್ವವಿದ್ಯಾಲಯದ Institutional Repository (IR) ಗೆ ಪ್ರಕಟಣೆಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ: ಕುಲಪತಿಗಳ ಆದೇಶ ದಿನಾಂಕ: 05-02-2023

ಕರ್ನಾಟಕ ವಿಶ್ವವಿದ್ಯಾಲಯವು ಎಲ್ಲ ಸ್ನಾತಕೋತ್ತರ ವಿಭಾಗಗಳ (ಎಲ್ಲ ಸ್ನಾತಕೋತ್ತರ ಕೇಂದ್ರಗಳು ಹಾಗೂ ಸಂಲಗ್ನ ಮಹಾವಿದ್ಯಾಲಯಗಳನ್ನು ಒಳಗೊಂಡು) ಖಾಯಂ ಶಿಕ್ಷಕರು ಪ್ರಕಟಿಸಿರುವ ಸಂಶೋಧನಾ ಲೇಖನಗಳ ಮತ್ತು ಪುಸ್ತಕಗಳ ಡಿಜಿಟಲ್ ರೂಪದಲ್ಲಿ ಸಾಂಸ್ಥಿಕ ಭಂಡಾರ (Institutional Repository) ಸ್ಥಾಪಿಸಲು ಉದ್ದೇಶಿಸಿದೆ. ಆದ್ದರಿಂದ ಎಲ್ಲ ಸ್ನಾತಕೋತ್ತರ ಶಿಕ್ಷಕರು ಇಲ್ಲಿಯವರೆಗೆ ಪ್ರಕಟಿಸಿದ ತಮ್ಮ ಎಲ್ಲ ಲೇಖನಗಳ ಹಾಗೂ ಪುಸ್ತಕಗಳ ಗಣಕಿಕೃತ ಪ್ರತಿಗಳನ್ನು (PDF ಆವೃತ್ತಿಯಲ್ಲಿ) ಕರ್ನಾಟಕ ವಿಶ್ವವಿದ್ಯಾಲಯವು ನೀಡಿದ Institutional e-mail ID ಮೂಲಕವೇ IR@kud.ac.in ಗೆ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಪೂರ್ಣ ಲೇಖನ/ಪುಸ್ತಕಗಳನ್ನು Copy Right ನಿಬಂಧನೆಗಳಿಂದಾಗಿ ಸಲ್ಲಿಸಲು ಸಾಧ್ಯವಾಗದಿದ್ದರೆ ಕೇವಲ ಲೇಖನದ ಮೊದಲ ಪುಟವನ್ನು ಹಾಗೂ ಪುಸ್ತಕದ ಮುಖ ಪುಟವನ್ನು ಎಲ್ಲ ಗ್ರಂಥ ವಿವರಣೆಗಳೊಂದಿಗೆ (Bibliographic Details) PDF ಆವೃತ್ತಿಯಲ್ಲಿ ಸಲ್ಲಿಸತಕ್ಕದ್ದು. ಲೇಖನ/ಪುಸ್ತಕ ಉಚಿತವಾಗಿ (open access) ಜಾಲತಾಣದಲ್ಲಿ ಲಭ್ಯವಿದ್ದರೆ ಸದರಿ ಜಾಲತಾಣದ URL ಲಿಂಕನ್ನು ಒದಗಿಸುವುದು.

Institutional Repository ಯಲ್ಲಿ ಸೇರಿಸಲು ಸಮ್ಮತಿ ಪತ್ರವನ್ನು (consent letter) ಅದಕ್ಕಾಗಿ ನಿರ್ದಿಷ್ಟ ಪಡಿಸಿದ (ಗ್ರಂಥಾಲಯದ ಜಾಲತಾಣದಲ್ಲಿ ಲಭ್ಯವಿದೆ) ನಮೂನೆಯ Hard copy ಯನ್ನು ವಿಭಾಗದ ಮುಖ್ಯಸ್ಥರ ಮೂಲಕ Librarian, Institutional Repository, Prof.S.S.Basavanal Library, Karnatak University, Dharwad ಇವರಿಗೆ ಸಲ್ಲಿಸತಕ್ಕದ್ದು. ಇನ್ನು ಮುಂದೆ ಪ್ರಕಟಗೊಳ್ಳುವ ಎಲ್ಲ ಪ್ರಕಟಣೆಗಳನ್ನು ಕಡ್ಡಾಯವಾಗಿ ಕಾಲಕಾಲಕ್ಕೆ IR ಗೆ ಸಲ್ಲಿಸಲು ತಿಳಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ www.kudlibrary.ac.in ಜಾಲತಾಣದಲ್ಲಿ ಪ್ರಕಟಿಸಲಾದ policy for Institutional Repository ಪ್ರತಿಯನ್ನು ಅವಲೋಕಿಸುವುದು.

13/2/23

ಕುಲಸಚಿವರು